1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 07

CW- 22

ಪ್ರ. ಬೋ. ದಿನಾಂಕಃ 24-09-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ವಿರೇಂದ್ರಪಾಟೀಲ್ |
| ತಂದೆ/ಗಂಡನ ಹೆಸರು | : | ಕರಿಬಸಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಡಿ ದರ್ಜೆ ನೌಕರ |
| ವಾಸ | : | ನಂದಿಗಾವಿ ಗ್ರಾಮ , |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಕಳೆದ 8 ವರ್ಷದಿಂದ ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ಡಿ-ದರ್ಜೆ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಚಾಸಾ-16 ರಿಂದ 21 ಮತ್ತು 23 ನನಗೆ ಪರಿಚಯವಿದ್ದಾರೆ. ದಿ.14-05-2023 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ನಾನು ಆಸ್ಪತ್ರೆಯ ಡ್ರೆಸ್ಸಿಂಗ್ ರೂವಿನಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ-16 ಡಾ.ಸವಿತಾ ರವರು ಚೀರಿಕೊಂಡರು , ನಂತರ ನಾನು ಹೊರಗಡೆ ಬಂದೆ. ಆಗ ಚಾಸಾ-16 ಇವರು ತುರ್ತು ಚಿಕಿತ್ಸಾ ವಿಭಾಗದಲ್ಲಿದ್ದರು. ಅವರ ಪಕ್ಕದಲ್ಲಿ ಕುಮಾರ , ಮಾರುತಿ , ರಾಜು , ಫಕ್ಕಿರಪ್ಪ ಇದ್ದರು. ನಾನು ಹೊರಗಡೆ ಬಂದು ನೋಡಿದಾಗ ಕುಮಾರ ಈತನು ರಕ್ತಸ್ರಾವವಾಗಿ ಬಿದ್ದಿದ್ದರು. ಫಕ್ಕಿರಪ್ಪನ ಬೆನ್ನಿನ ಹಿಂಭಾಗದಲ್ಲಿ ರಕ್ತ ಸೋರುತ್ತಿತ್ತು.

1 ನೇ ಆರೋಪಿಯು ಕುಮಾರ ಇವರ ಕುತ್ತಿಗೆಯ ಎರಡುಭಾಗದಲ್ಲಿ ಚಾಕು ಹಾಕಿದ್ದರು, ಅದೇ ಪ್ರಕಾರ 1 ನೇ ಆರೋಪಿಯು ಫಕ್ಕಿರಪ್ಪನ ಎಡಭುಜಕ್ಕೆ ಚಾಕು ಹಾಕಿದ್ದ. ಕುಮಾರ ಈತನು ರಕ್ತಸ್ರಾವವಾಗ ಕೆಳಗಡೆ ಬಿದ್ದಿದ್ದ. ಆಗ ವೈದ್ಯರಾದ ಚಾಸಾ-16 ರವರು ತಕ್ಷಣ ಅಂಬುಲನ್ಸ ಮುಖಾಂತರ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದರು. ಆಗ ನಾನು ಮತ್ತು ನಾಗರಾಜ ಇಬ್ಬರೂ ಸೇರಿ ಅಂಬುಲನ್ಸನಲ್ಲಿ ಕುಮಾರ್

ಈತನನ್ನು ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು  ಹೋದೆವು. ಆಗ ಸದರಿಯವರನ್ನು ಆಸ್ಪತ್ರೆಗೆ ಸೇರಿಸಿದಾಗ ವೈದ್ಯರು ಆತನನ್ನು ನೋಡಿ ಆತ ಮೃತಪಟ್ಟಿದ್ದಾನೆ ಎಂದು ತಿಳಿಸಿದರು.  ನಂತರ ನಾವು ಅಂಬುಲನ್ಸನಲ್ಲಿ ಪುನಃ ನಮ್ಮ ಆಸ್ಪತ್ರೆಗೆ ಬಂದು ಸದರಿ ವಿಷಯವನ್ನು ಚಾಸಾ-16 ರವರಿಗೆ ತಿಳಿಸಿದೆವು. ಆ ದಿನ ಇರತಕ್ಕಂತ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ. ಈ ರೀತಿಯ ಗಲಾಟೆ ಆಸ್ತಿಯ ವಿಚಾರವಾಗಿ ಆಗಿರುತ್ತದೆ ಅಂತಾ ನಂತರ ಗೊತ್ತಾಯಿತು.

ನಂತರ ಪೊಲೀಸ್ ಮಾಡಿ, ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು , ಆಗ ನಾನು ಘಟನೆಗೆ ಸಂಬಂಧಪಟ್ಟಂತೆ ಹೇಳಿಕೆ ನೀಡಿರುತ್ತೇನೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.164 ರ ಹೇಳಿಕೆ ನೋಡುತ್ತಿದ್ದು, ಅದನ್ನು ನಿಪಿ.19 ಎಂದು, ನನ್ನ ರುಜುವನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ಚಾಕು ಹಾಕಿದ್ದನ್ನು ನಾನು ನೋಡಿಲ್ಲ. ಅಂಬುಲನ್ಸನಲ್ಲಿ ನಾವು ರೋಗಿಯನ್ನು ಎಲ್ಲಿಂದ ಎಲ್ಲಿಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಗುರುತಿಸಲು ಲೆಡ್ಜರ್ ಇರುತ್ತದೆ. ಸದರಿ ಲೆಡ್ಜರ್ ಅಂಬುಲನ್ಸನಲ್ಲಿ ಇರುತ್ತದೆ. ಅದನ್ನು ನಾನು ನೋಡಿಲ್ಲ.  ನಿಪಿ.19 ರಲ್ಲಿ ನಾನು ದಾವಣಗೆರೆಗೆ ಹೋಗಿದ್ದೆ ಎಂದು ಹೆಳಿಕೆಯಲ್ಲಿ ಹೇಳಿಲ್ಲ. ನಂತರ ಅಂಬುಲನ್ಸನಲ್ಲಿ ಅವರನ್ನು ದಾವಣಗೆರೆ ಆಸ್ಪತ್ರೆಗೆ ಕಳುಹಿಸಿದೆವು , ಅಲ್ಲಿ ಅವರು ಮರಣ ಹೊಂದಿದ್ದಾರೆ ಎಂದು ತಿಳಿಯಿತು ಎಂದು ಹೇಳಿಕೆಯಲ್ಲಿ ಇರುತ್ತದೆ. ಆ ದಿನ ನಾನು ಅಂಬುಲನ್ಸ ಮುಖಾಂತರ ಕುಮಾರ್ ಈತನನ್ನು ಕರೆದುಕೊಂಡು ಹೋದಬಗ್ಗೆ ನಿಪಿ.19 ರಲ್ಲಿ ನಮೂದು ಆಗಿಲ್ಲ.  ಕುಮಾರ ಮತ್ತು ಫಕ್ಕಿರಪ್ಪ ಇವರ ಹೆಸರು ನನಗೆ ಪೊಲೀಸರಿಂದ ಗೊತ್ತಾಗಿರುತ್ತದೆ ಎನ್ನುವುದು ಸುಳ್ಳು.  1 ನೇ ಆರೋಪಿಯು ಕುಮಾರನ ಕುತ್ತಿಗೆಗೆ ಚಾಕು ಹಾಕಿರುತ್ತಾನೆ , ಫಕ್ಕಿರಪ್ಪನ ಭುಜಕ್ಕೆ ಚಾಕು ಹಾಕಿರುತ್ತಾನೆ ಎಂದು ನಾನು ಪೊಲೀಸರ ಮೂಲಕ ತಿಳಿದುಕೊಂಡು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.  ಆ ದಿನ ನಾನು ಅಂಬುಲನ್ಸ ಮೂಲಕ ದಾವಣಗೆರೆಗೆ ಹೋಗಿಲ್ಲ, ಘಟನೆಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎನ್ನುವುದು ಸುಳ್ಳು.  ಆಸ್ಪತ್ರೆಯ ಹತ್ತಿರ ಜನರು ಹೇಳುತ್ತಿದ್ದರಿಂದ ಆಸ್ತಿ ವಿಚಾರವಾಗಿ ಗಲಾಟೆಯಾಗಿದೆ ಎಂದು ನನಗೆ ಗೊತ್ತಾಯಿತು. ಅದೇ ದಿನ ರಾತ್ರಿ 12-30 ಗಂಟೆ ಸುಮಯದಲ್ಲಿ ನಮಗೆ ಈ ವಿಚಾರ ಗೊತ್ತಾಯಿತು. ಆಸ್ತಿ ವಿಚಾರದಲ್ಲಿ

ಗಲಾಟೆಯಾಗಿದೆ ಎಂದು ಹೇಳಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಯಾವುದೇ ಆಸ್ತಿ ವಿಚಾರದ ಬಗ್ಗೆ ಗಲಾಟೆಯಾಗಿದೆ ಅಂತಾ ಯಾರು ಹೇಳದಿದ್ದರೂ ಸಹ ಜನರಿಂದ ನನಗೆ ಗೊತ್ತಾಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸಂಪೂರ್ಣ ಸುಳ್ಳಿನಿಂದ ಕೂಡಿವೆ ಎನ್ನುವುದು ಸುಳ್ಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.